# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ)** **ಮೈಸೂರು**

ಸಂಪುಟ 1 ಸಂಚಿಕೆ 6
Volume 1 Issue 6
ಮಂಗಳವಾರ 6-10-2015
Email: mahilavishesha@yahoo.com

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮೈಸೂರು
ಪುಟ 4
ಬೆಲೆ ₹ 2


## ಗೋಲ್ಟ್ ಕಾರ್ಡ್ ಮಾರಾಟವಿಲ್ಲ: ಶಿಖಾ



ರಾಜ್ಯದ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ನಾಡ ಹಬ್ಬ ದಸರಾ ಮಹೋತ್ಸವವನ್ನು ಸರಳವಾಗಿ ಆಚರಿಸಲು ನಿರ್ಧರಿಸಿರುವುದರಿಂದ ಈ ಸಲ ಗೋಲ್ಡ್ ಕಾರ್ಡ್ ಇರುವುದಿಲ್ಲ ಎಂದು ಜಿಲ್ಲಾಧಿಕಾರಿ ಸಿ. ಶಿಖಾ ತಿಳಿಸಿದ್ದು ಆದರೆ ಪ್ರವಾಸಿಗರಿಗೆ ದೇಶ ವಿದೇಶದಿಂದ ಬಂದವರಿಗೆ ಸಾಮಾನ್ಯ ಪಾಸ್‌ನ ವ್ಯವಸ್ಥೆಯೇ ಇರುತ್ತದೆ ಎಂದು ತಿಳಿಸಿದರು.

## ಚಿಕ್ಕಮ್ಮ ನೇಮಕ



ಮೈಸೂರಿನ ಕುವೆಂಪುನಗರದ ನವಿಲು ರಸ್ತೆಯಲ್ಲಿರುವ ಮನಸ್ವಂತರ ಸಮೂಹ ಬಳಗದ ಮಹಿಳಾ ಸಂಘದ ಅಧ್ಯಕ್ಷೆ ಯಾಗಿ ಚಿಕ್ಕಮ್ಮ ಬಸವರಾಜು ನೇಮಕ ಗೊಂಡಿದ್ದಾರೆ. ಇವರು ಹಿಂದೆ ಮೈಸೂರಿನ ನಗರ ಪಾಲಿಕೆಯ ಸದಸ್ಯರಾಗಿದ್ದರು. ಇವರಿಂದ ಮಹಿಳಾ ಬಳಗಕ್ಕೆ ಹೆಚ್ಚಿನ ಸೌಲಭ್ಯ ದೊರೆಯಲಿ.

## ರೈಲುಗಳ ವೇಳಾಪಟ್ಟಿ ಬದಲಾವಣೆ

ಅಕ್ಟೋಬರ್ 1 ರಿಂದ ನೈರುತ್ಯರೈಲ್ವೆ ವಿಭಾಗದ ಮೈಸೂರು ರೈಲು ನಿಲ್ದಾಣದಿಂದ ಹೊರಡುವ ಕೆಲವು ರೈಲುಗಳ ವೇಳಾಪಟ್ಟಿ ಬದಲಾವಣೆ ಗೊಂಡಿರುತ್ತದೆ ಎಂದು ರೈಲ್ವೆಯ ಹಾಗೂ ವಾಣಿಜ್ಯ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮುಂದಿನ ಸಂಚಿಕೆಯಲ್ಲಿ ವೇಳಾಪಟ್ಟಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ರೈಲ್ವೆ ಪ್ರಯಾಣಿಕರು ಹೊಸ ವೇಳಾ ಪಟ್ಟಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಸೂಚಿಸಿದೆ.

### ಆನ್‌ಲೈನ್‌ನಲ್ಲಿ ಮಹಿಳಾ ವಿಶೇಷ

ಅಭಿಮಾನಿಗಳ ಆಪೇಕ್ಷೆಯ ಮೇರೆಗೆ ಹಾಗೂ ಪತ್ರಿಕೆಯ ಬೆಳವಣಿಗೆಗೆಗಾಗಿ ದಸರಾದಿಂದ ಪತ್ರಿಕೆ ಆನ್‌ಲೈನ್ ಲಭ್ಯವಿರುತ್ತದೆಂದು ತಿಳಿಸಿದೆ. ಸ್ನೇಹಿತರು ಹಾಗೂ ಅಭಿಮಾನಿಗಳು ಆರ್ಥಿಕ ಸಹಾಯ ನೀಡಲು ಕೋರಲಾಗಿದೆ.

-ಸಂಪಾದಕರು

## ಮೈಸೂರು ದಸರಾ ಅಕ್ಟೋಬರ್ 13ರ ರಿಂದ 23ರ ವರೆಗೆ.



ಮೈಸೂರು ನಾಡಹಬ್ಬ ಈ ಬಾರಿ ಸರಳವಾಗಿ ಆಚರಿಸಲು ಉದ್ದೇಶಿಸಿದ್ದರೂ ಪ್ರತಿವರ್ಷದಂತೆ ಕಾರ್ಯಕ್ರಮಗಳು ನಡೆಯಲಿದ್ದು ಸಾಂಪ್ರದಾಯಿಕ ಪದ್ಧತಿಯಂತೆ ಒಡೆಯರ್ ನಿವಾಸದಲ್ಲಿ ರಾಜವಂಶಸ್ಥೆ ರಾಣಿ ಪ್ರಮೋದಾ ದೇವಿ ಹಾಗೂ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರನ್ನು ದಸರಾಕ್ಕೆ ಅಧಿಕೃತವಾಗಿ ಆಹ್ವಾನವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀನಿವಾಸ್ ಪ್ರಸಾದ್‌ರವರು ಹಾಗೂ ಇತರ ಗಣ್ಯರುಗಳು ಆಹ್ವಾನಿಸಿದರು. ಜಂಬೂ ಸವಾರಿ 23ನೇ ತಾರೀಖಿನಂದೇ ನಡೆಯುವುದೆಂದು ಪ್ರಕಟಣೆಯಲ್ಲಿ ತಿಳಿಸಿದೆ. ನಗರದ ಜನತೆ, ಸುತ್ತಮುತ್ತಲಿನ ಜನರುಗಳು ದಸರಾ ಹಬ್ಬ ಹಾಗೂ ಕಾರ್ಯಕ್ರಮಗಳಿಗೆ ಬಂದು ಯಶಸ್ವಿಗೊಳಿಸಿ ಎಂದು ಕೋರಲಾಗಿದೆ.

## ಗಣಕ ವಿಜ್ಞಾನ ಭಿತ್ತಿಪತ್ರಗಳ ಪ್ರದರ್ಶನ



ಸರ್ಕಾರಿ ಮಹಿಳಾ ಕಾಲೇಜು, ಹುಣಸೂರಿನಲ್ಲಿ ಆಯೋಜಿಸಿದ್ದ ಗಣಕ ವಿಜ್ಞಾನ ಭಿತ್ತ ಪತ್ರಗಳ ಪ್ರದರ್ಶನವನ್ನು ಮೈಸೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ಹಂಸವೇಣಿ ಉದ್ಘಾಟಿಸಿ ಮಾತನಾಡುತ್ತಾ ಇಂದು ಕಂಪ್ಯೂಟರ್ ಜ್ಞಾನ ಹೊಂದಿರದವರು ಅನಕ್ಷರಸ್ಥರೆಂದೇ ಭಾವಿಸುವಂತಾಗಿದೆ. ಏಕೆಂದರೆ ಕಂಪ್ಯೂಟರ್ ಇಲ್ಲದೇ ಜೀವನವೇ ಇಲ್ಲದಂತಾಗಿದೆ ಎಂದು ಅಭಿಪ್ರಾಯ ಪಟ್ಟರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲೆ ಪ್ರೊ. ಎಂ. ಆರ್. ಸೌಭಾಗ್ಯ ವಹಿಸಿದ್ದು ಇನ್ನು ಮುಂದೆ ಕೈ ಬರವಣಿಗೆ ಕಾಣೆಯಾಗಬಹುದು. ಆದ್ದರಿಂದ ಎಲ್ಲರೂ ಕಂಪ್ಯೂಟರ್ ಬಳಕೆಯೊಂದಿಗೆ ಕೈ ಬರವಣಿಗೆಯನ್ನು ಮರೆಯಬೇಡಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ತಿಳಿಸಿದರು.

### ಮೈಸೂರು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂನಲ್ಲಿ

ಮೈಸೂರು ನಗರದ ಕೆಎಸ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದ ಹತ್ತಿರದಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂನಲ್ಲಿ ವಿವಿಧ ಕಾಲೇಜಿನ ಒಟ್ಟು 256 ವಿದ್ಯಾರ್ಥಿನಿಯರುಗಳಿಗೆ ಮಲಬಾರ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಶಿಕ್ಷಣ ಅಧಿಕಾರದ ಸ್ತ್ರೀ ಅಧಿಕಾರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ನಿಜಕ್ಕೂ ಈ ಕಾರ್ಯಕ್ರಮ ಜನಮೆಚ್ಚುವಂತದ್ದು. ವಿದ್ಯಾರ್ಥಿ ವೇತನವನ್ನು ವಿತರಿಸಿದ ನಗರದ ಮೇಯರ್ ಆರ್. ಲಿಂಗಪ್ಪನವರು, ಲಗರ ಪಾಲಿಕೆ ಸದಸ್ಯರಾದ ಕೆ.ವಿ. ಮಲ್ಲೇಶ್, ಮಲಬಾರ್ ಗೋಲ್ಡ್ ಮೈಸೂರು ಶಾಖೆಯ ನಿರ್ದೇಶಕ ಶರ್ಫುದ್ದೀನ್, ಕಾಲೇಜಿನ ವಿದ್ಯಾರ್ಥಿನಿಯರು, ಪೋಷಕರು ಈ ಸಂದರ್ಭದಲ್ಲಿ ಹಾಜರಿದ್ದರು. ನಗರದ ಮಹಿಳಾ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡಿದ್ದರಿಂದ ಮವಿ ಬಳಗದಿಂದ ಮಲಬಾರ್ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಶಾಖೆಯ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂಗೆ ಒಂದು ಸಲಾಂ ಹಾಗೂ ಅಭಿನಂದನೆಗಳು.

## ಸರ್ಕಾರಿ ನೌಕರರಿಗೆ ಡಿಎ ಹೆಚ್ಚಳ

ಜುಲೈ 2015ರಿಂದ ರಾಜ್ಯದ ಸರ್ಕಾರಿ ನೌಕರರಿಗೂ ಹಾಗೂ ನಿವೃತ್ತಿಯಾಗಿರುವ ನೌಕರರಿಗೂ ಶೆ. 3.75ರಷ್ಟು ತುಟ್ಟಿ ಭತ್ಯೆಯನ್ನು ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ. ಇದರಿಂದ ಸರ್ಕಾರಿ ನೌಕರರಿಗೆ ಸಂಬಳ ಜಾಸ್ತಿ ಸಿಕ್ಕರೆ ಸರ್ಕಾರಕ್ಕೆ ಹೊರಯಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಆದೇಶಕ್ಕೆ ರಾಜ್ಯ ಸರ್ಕಾರ ನೌಕರರ ಸಂಘದ ಅಧ್ಯಕ್ಷರ ಹಾಗೂ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ವಾಹನ, ಗೃಹ ಸಾಲ ಅಗ್ಗ

ಆರ್‌ಬಿಐ ಗವರ್ನರ್ ರೆಪೋ ದರವನ್ನು ಶೇ. 0.5ರಷ್ಟು ಇಳಿಸಲಾಗಿದೆ ಎಂದು ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಆರ್‌ಬಿಐ ಸಾಲ ನೀತಿಯನ್ನು ಪ್ರಕಟಿಸಿದ್ದು ಬಡ್ಡಿದರ ಕಡಿಮೆ ಮಾಡಿ ರೆಪೋ ದರವನ್ನು ಇಳಿಕೆ ಮಾಡಿದೆ. ಮುಂದಿನ ದಿನಗಳಲ್ಲಿ ಇನ್ನು ಅಗ್ಗವಾಗಬಹುದೆಂಬ ನಿರೀಕ್ಷೆಯೂ ಇದೆ.

## ಮುದ್ರಾ ಯೋಜನೆ ಕಾರ್ಯಕ್ರಮ

ಮಡಿಕೇರಿಯಲ್ಲಿ ಕಳೆದವಾರ ಪ್ರಧಾನ ಮಂತ್ರಿಯವರ ಮುದ್ರಾ ಯೋಜನೆಯ ವತಿಯಿಂದ ಮುದ್ರಾ ಸಾಲದ ಮೆಗಾ ಶಿಬಿರ ನಡೆಯಿತು. ಮುದ್ರಾ ಯೋಜನೆಯಲ್ಲಿ ಆರ್ಥಿಕ ಸೌಲಭ್ಯವನ್ನು ಪಡೆಯಲು ಅವಕಾಶವಿದ್ದು ಅದನ್ನು ಸದುಪಯೋಗ ಪಡೆದುಕೊಳ್ಳಬೇಕೆಂದು ಜಿ. ಪಂ. ಉಪಾಧ್ಯಕ್ಷೆ ಬೀನಾ ಬೊಳ್ಳಮ್ಮ ತಿಳಿಸಿದರು.

ಕಾವೇರಿ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಿರು ಉದ್ದಿಮೆಗಾರರಿಗೆ ಸಾಲ ಮಂಜೂರಾತಿ ಪತ್ರವನ್ನು ವಿತರಿಸಿದರು. ಇಂದಿನ ಕಾರ್ಯಕ್ರಮದಲ್ಲಿ ವಿವಿಧ ಬ್ಯಾಂಕುಗಳಿಂದ 120 ಕಿರು ಉದ್ದಿಮೆಗಾರರಿಗೆ ಮುದ್ರಾ ಸಾಲದ ಮಂಜೂರಾತಿ ಪತ್ರ ವಿತರಿಸಲಾಯಿತೆಂದು ಮಾಹಿತಿ ದೊರೆತಿದೆ.

## ಆರೋಗ್ಯ ನಡಿಗೆ

ಜೆಎಸ್‌ಎಸ್ ಆಸ್ಪತ್ರೆ ಹಾಗೂ ಜೆಎಸ್‌ಎಸ್ ವೈದ್ಯಕೀಯ ನರ್ಸಿಂಗ್ ಕಾಲೇಜು ವಿದ್ಯಾರ್ಥಿನಿಯರುಗಳು ಸಾರ್ವಜನಿಕರಿಗೆ ಹೃದಯರೋಗದ ಬಗ್ಗೆ ಅರಿವು ಮೂಡಿಸಲು ವಿಶ್ವ ಹೃದಯ ದಿನಾಚರಣೆಯ ಪ್ರಯುಕ್ತ ವಾಕ್‌ಥಾನ್ ನಡೆಸಿದರು. "ಒಳ್ಳೆಯ ಆಹಾರ ಸೇವಿಸಿ, ಬಹುದಿನ ಜೀವಿಸಿ" ಎಂಬ ಘೋಷಣೆ ವಾಕ್ಯ ಜನರಲ್ಲಿ ಹೊಸ ಸಂಚಲನ ಮೂಡಿಸುವಂತೆ ಇತ್ತು.

### ಬದುಕೇ ಹೀಗೆ !

**"ಬೆಳಕಿನಲ್ಲಿ ಬೆಳಕಿಗೆ ಬೆಲೆಯಿಲ್ಲ; ಆದರೆ ಕತ್ತಲೆಯಲ್ಲಿ ಕಿರುದೀಪಕ್ಕೂ ಹಿರಿದಾದ ಬೆಲೆಯುಂಟು" - ಅನಾಮಿಕ**

### ನಡೆ - ನು ಡಿ

"ನೀವು ಹೇಗೇ ಇದ್ದರೂ ನಿಮ್ಮನ್ನು ನೀವು ಪ್ರೀತಿಸುವುದನ್ನು ಕಲಿಯಿರಿ."

### ಒಗಟು

ಹರೆಯದಲ್ಲಿ ಹಸಿರು, ಪ್ರಾಯದಲ್ಲಿ ಕೆಂಪು, ಮುಪ್ಪಿನಲ್ಲಿ ಕಪ್ಪು ನಾನು ಯಾರು ?

ಉತ್ತರ : ನೇರಳೆ ಹಣ್ಣು

- ಮೀರಾಬಾಯಿ, ಮೈಸೂರು

### ಹೇಗಿರಬೇಕು?

"ಇತರರ ಯಶಸ್ಸನ್ನು ಹಳಿಯುವುದು ಮತ್ತು ತನ್ನ ಯಶಸ್ಸನ್ನು ಕೊಂಡಾಡುವುದು ಕೀಳರಿಮೆಯ ಲಕ್ಷಣಗಳು."

ಪೂರ್ಣಿಮ, ಮೈಸೂರು

### ಪ್ರಶ್ನೋತ್ತರ

ಪ್ರ: . WAN ಎಂದರೇನು ?
ಉ:Wide Area Network
ಪ್ರ: www ಇದರ ವಿಸ್ತರಣೆ ಏನು ?
ಉ:world wide web
ಪ್ರ: DTP ಇದರ ವಿಸ್ತರಣಾ ರೂಪ
ಉ:Desk Top Publishing
ಪ್ರ: E-mail ವಿಸ್ತರಿಸಿ
ಉ:Electronic mailing
ಪ್ರ: PC ವಿಸ್ತರಿಸಿ.
ಉ:Personal Computer

### ಜನರೇಷನ್ ಗ್ಯಾಪ್

15. ಜೀವನದ ಮೌಲ್ಯಗಳಿಗೆ ಪ್ರಾಧಾನ್ಯತೆ ನೀಡಿ ಆದರಂತೆ ನಡೆದುಕೊಳ್ಳುವವರು.
16. ಹಿರಿಯರಿಂದ ಉಪದೇಶಗಳು, ಉಪನ್ಯಾಸಗಳು, ನೀತಿ ಕತೆಗಳನ್ನು ಕೇಳಿ, ಜೀವನದಲ್ಲಿ ಅಳವಡಿಸಿ ಕೊಂಡವರು
17. ಇತಿ - ಮಿತಿಯಲ್ಲಿದ್ದ ಹವ್ಯಾಸಗಳು ಮತ್ತು ದುಶ್ಚಟಗಳು
18. ಬುದ್ಧಿವಂತರು.
19. ಸಾಮಾನ್ಯವಾದ ಸಂಪಾದನೆ ಇರುವವರು, ಹಣದ ಬೆಲೆ ತಿಳಿದವರು
20. ವೈಯಕ್ತಿಕ ತ್ಯಾಗ, ದುಡಿದು ತಿನ್ನುವ ಮನೋಭಾವ ಹೊಂದಿರುವವರು
21. ಆಸ್ತಿಕತೆಯಲ್ಲಿ ನಂಬಿಕೆ, ಒಲವು ಇರುವವರು, ದಾನ, ಧರ್ಮಗಳು, ಪೂಜೆ ಪುನಸ್ಕಾರಗಳಲ್ಲಿ ಆಸಕ್ತಿ ಇರುವವರು. ವಾಸಿಸುವವರು.

...........ಮುಂದುವರಿಯುವುದು

### ಸ್ವಲ್ಪ ನಗ್ತೀರಾ ಪ್ಲೀಸ್....?

**"ಸಾಲಕ್ಕೆ ಕೊನೆಯಿಲ್ಲ"**

- ಕೊನೆ ಅನ್ನೋದು ಯಾವ ಮಹಾ?
- ಸಾಲವೇ ಆದಾಯದ ಒಂದು ಮೂಲವೂ ಆಗಿರುವಾಗ, ಅದೇ ಒಂದು ಬಿಡ ಬಿಡವಾವು ಆಗಿರುವಾಗ ಕೊನೆ ಎಲ್ಲಿ ಬಂತು?

ಕೊನೆಗಾಣಿಸೋ ಧೀರನಾದರೂ ಯಾರು ?

## ಧಾರವಾಡದಲ್ಲಿ ಕೃಷಿಮೇಳ




ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಹಾಗೂ ಕೃಷಿ ಮಹಿಳೆ ಪ್ರಶಸ್ತಿ ಪುರಸ್ಕೃತರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ

## ಪೂವಮ್ಮಗೆ ಅರ್ಜುನ ಪ್ರಶಸ್ತಿ



### ಪದಗಳನ್ನು ಓದಿ ಮುಂದುವರಿಸಿ

| | | |
|---|---|---|
| ಅಳಿಸು | ಉಳಿಸು | ಗಳಿಸು |
| ಬೀಳಿಸು | ಸೋಲಿಸು | ಏಳಿಸು |
| ಕಳಿಸು | ಚಲಿಸು | ಪಾಲಿಸು |
| ಬೆಳೆಸು | ಲಾಲಿಸು | ಆಲಿಸು |
| ಸಹಿಸು | ಹೋಲಿಸು | ಕ್ಷಮಿಸು |
| ಹರಸು | ಗರ್ಜಿಸು | ಚುಂಬಿಸು |
| ಬಿಂಬಿಸು | ಹಾರೈಸು | ತೆಗೆಸು |
| ಬಾರಿಸು | ಉರಿಸು | ಸುರಿಸು |
| ಅಗೆಸು | ಸುಲಿಸು | ಸಲೀಸು |
| ಜಾರಿಸು | ಬಾಳಿಸು | ಪೋಷಿಸು |
| ಯೋಚಿಸು | ಮೂಡಿಸು | ಸಂದಿಸು |
| ಸೇವಿಸು | ಕಲಾಸು | ಗಂಡಸು |
| ಹೆಂಗಸು | ಹಿಂಸಿಸು | ಶೋಧಿಸು |
| ಕೆಡಿಸು | ಆಡಿಸು | ಮುದ್ದಿಸು |
| ಪೂರೈಸು | ಸಂತೈಸು | ವಾಸಿಸು |

- ನಂದಿನಿ, ಮೈಸೂರು

### ಗಿಣಿ



ಗಿಣಿಯೇ ಗಿಣಿಯೇ
ಮುದ್ದಿನ ಗಿಣಿಯೇ
ಹಸಿರು ಬಣ್ಣದ ಗಿಣಿಯೇ
ಕತ್ತಿನ ಸುತ್ತ ಕೆಂಪು
ಬಣ್ಣವಿರುವ ಗಿಣಿಯೇ
ಕೆಂಪು ಕೊಕ್ಕನು
ಹೊತ್ತಿರುವ ಗಿಣಿಯೇ
ಮಾತನು ಆಡುವ ಗಿಣಿಯೇ
ಚೆಲುವಾದ ಗಿಣಿಯೇ
ಕೆಲವು ಮನೆಯಲ್ಲಿ
ಪಂಜರದಲ್ಲಿರುವ ಗಿಣಿಯೇ
ಆಕಾಶದಲ್ಲಿ ಸ್ವಚ್ಛಂದವಾಗಿ
ಹಾರಾಡುವ ಗಿಣಿಯೇ
ಪ್ರಕೃತಿಯ ಸೌಂದರ್ಯವ
ಅನುಭವಿಸುವ ಗಿಣಿಯೇ
ಭಗವಂತನು ನಿನ್ನನು
ಸೃಷ್ಟಿಸಿಹನು.

-ಶೀತಲ್ ಬೆಂಗಳೂರು

### ಸುಂಸುಂನೆ

ನಾನು ಅಪ್ಪಟ ಸತ್ಯವಂತ ವ್ಯಕ್ತಿ!
ಆದರೆ ಏನಾದ್ರೂ ಸತ್ಯ ಹೇಳುವ ಮೊದಲು ಒಂದು ಸುಳ್ಳು ಹೇಳಿ ಅಭ್ಯಾಸ......!

ತುಳಸಿ, ಮಂಡ್ಯ

## ಮೈಸೂರು ದಸರಾ ಸಿದ್ಧತೆಗಳ ಬಗ್ಗೆ ಸಭೆ




ಮೈಸೂರು ದಸರಾ ಸಿದ್ಧತೆಗಳ ಬಗ್ಗೆ ಸಚಿವೆ ಉಮಾಶ್ರೀರವರು ಪತ್ರಕರ್ತರಿಗೆ ವಿವರ ನೀಡುತ್ತಿರುವುದು.

**ಈ ಪತ್ರಿಕೆಯನ್ನು ಓದಿ ನಿಮ್ಮಲ್ಲಿರುವ ಮಾಹಿತಿಗಳನ್ನು ನೀಡಿ ಪತ್ರಿಕೆಯನ್ನು ಬೆಳೆಸಿ.**

ಈ ಜಾಗ ಓದುಗರಿಗಾಗಿ ಸ್ವಂತ ನಗೆಹನಿ, ಬರಹ, ಚುಟುಕು, ಕವನ ಇತ್ಯಾದಿಗಳನ್ನು ಪ್ರಕಟಿಸಲು ಕಳುಹಿಸಿಕೊಡಿ. ಪ್ರಕಟಿಸಲು ಕೆಲವು ಮಾನದಂಡಗಳನ್ನು ಅಳವಡಿಸಲಾಗಿದೆ. ಪ್ರಕಟಿಸುವ ವಿಚಾರ ಪತ್ರಿಕೆಯ ಮಂಡಳಿಕೆ ಸೇರಿದ್ದಾಗಿರುತ್ತದೆ.

## ನೇಮಕಾತಿ ಅಂಕಣ

### ಅರ್ಜಿ ಆಹ್ವಾನ

**ವಿವಿಧ ಹುದ್ದೆಗಳಿಗೆ ಅರ್ಜಿ**

ಇಂಡಿಯನ್ ಆರ್ಮಿಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಕರೆಯಲಾಗಿದ್ದು ಅರ್ಜಿ ಸಲ್ಲಿಸಲು9-10-15ರಂದು ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ www. indianarmy.nic.in ವೆಬ್‌ಸೈಟನ್ನು ಸಂಪರ್ಕಿಸಿ.

**ನೌಕಾಪಡೆಯಲ್ಲಿನೇಮಕಾತಿ**

ವಿವಿಧ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅರ್ಹ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಿದೆ. ವಿದ್ಯಾರ್ಹತೆ, ವಯಸ್ಸು, ಇತ್ಯಾದಿ ಮಾಹಿತಿ ಪಡೆಯಲು www. joinindianarmynavy.gov.in ವೆಬ್‌ಸೈಟ್ ನೋಡಿ ಅರ್ಜಿ ಸಲ್ಲಿಸಲು 12-10-15ರಂದು ಕೊನೆಯ ದಿನವಾಗಿದೆ.

**ಕೋಸ್ಟಲ್ ಸೆಕ್ಯುರಿಟಿ ಪೊಲೀಸ್**

ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಉಡುಪಿ ಕಛೇರಿಯಿಂದ ಅರ್ಜಿಯನ್ನು ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ 0820-2538120ಗೆ ಸಂಪರ್ಕಿಸಿ ಹಾಗೂ ಅರ್ಜಿ ಸಲ್ಲಿಸಲು9-10-15ರಂದು ಕೊನೆಯ ದಿನವಾಗಿದೆ.

**ಮಿಲಿಟರಿ ಇಂಜಿನಿಯರಿಂಗ್**

ಎಸ್‌ಎಸ್‌ಎಲ್‌ಸಿ ಹಾಗೂ ಐಟಿಐ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗಾಗಿ ಅರ್ಜಿ ಆಹ್ವಾನಿಸಿದೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.mes.gov.in ನೋಡುವುದು. ಅಲ್ಲದೆ ಅರ್ಜಿಸಲ್ಲಿಸಲು10-10-15ರಂದು ಕೊನೆಯ ದಿನಾಂಕ.

**ಈಸ್ಟ್ ಕೋಸ್ಟ್ ರೈಲ್ವೆ**

ಕ್ರೀಡಾ ಮೀಸಲು ಹುದ್ದೆಯನ್ನು ಭರ್ತಿ ಮಾಡಲು ಅರ್ಜಿಯನ್ನು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿದೆ. ವಿವಿಧ ಹುದ್ದೆಗಳು ಖಾಲಿ ಇದ್ದು ಹೆಚ್ಚಿನ ಮಾಹಿತಿಗಾಗಿ www.eastcoastalrail.indianrailways.gov.in ನೋಡಿ. ಅರ್ಜಿ ಸಲ್ಲಿಸಲು 12-10-15 ರಂದು ಕೊನೆಯ ದಿವಸ.

**ಸ್ಟಾಫ್, ಸೆಲೆಕ್ಷನ್ ಕಮೀಷನ್**

ಸಹಾಯಕ ಅಸಿಸ್ಟೆಂಟ್ ಹುದ್ದೆಗಳಿಗೆ ಕಂಪ್ಯೂಟರ್ ಸೈನ್ಸ್ ಪದವಿಯಾಗಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ www.ssckkr.kar.nic.inವೆಬ್‌ಸೈಟ್ ನೋಡಿ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 9-10-15

**ನ್ಯಾಷನಲ್ ಡಿಫೆನ್ಸ್ ಅಕಾಡೆಮಿ**

ಖಾಲಿ ಇರುವ ಗ್ರೂಪ್ 'ಸಿ' ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ವಿವಿಧ ಹುದ್ದೆಗಳಿದ್ದು 125 ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ www. ndc.nic.inನೋಡಿ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ9-10-15.

**ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ.**

# ಪುಟಾಣಿ - ಬಟಾಣಿ

ಊರ ಮುಂದಿರುವ ಕೆರೆಯ ಹತ್ತಿರ ಒಂದು ತೋಳ ಬೇಟೆಗಾಗಿ ಹೊಂಚು ಹಾಕುತ್ತಿತ್ತು. ಮುದಿ ಕುರಿಯೊಂದು ನೀರು ಕುಡಿಯಲು ಬಂದಾಗ ಅದರ ಮೇಲೆ ಬಿದ್ದು ಅದನ್ನು ಕೊಂದು ಅವಸರ ಅವಸರವಾಗಿ ಅದರ ಮಾಂಸವನ್ನು ತಿನ್ನುವಾಗ ಕುರಿಯ ಮೈಯಲ್ಲಿದ್ದ ಚಿಕ್ಕ ಮೂಳೆಯ ತುಂಡು ತೋಳದ ಗಂಟಲಲ್ಲಿ ಅಡ್ಡಡ್ಡವಾಗಿ ಸಿಕ್ಕಿಹಾಕಿಕೊಂಡಿತು. ನುಂಗಲು ಆಗದೆ ನೋವಾಗತೊಡಗಿತು. ಆಗ ತೋಳ ನೋವಿನಿಂದ ಒದ್ದಾಡುತ್ತಾ ಒದ್ದಾಡುತ್ತಾ ಯಾರಾದರೂ ಬಂದು ನನ್ನ ಗಂಟಲಲ್ಲಿ ಸಿಕ್ಕಿಕೊಂಡಿರುವ ಮೂಳೆಯನ್ನು ತೆಗೆದರೆ ಬಹುಮಾನ ಕೊಡುವುದಾಗಿ ಅರಚಿಕೊಂಡಿತು. ನೀರಲ್ಲಿಯೇ ಇದ್ದ ಬಕ ಪಕ್ಷಿ ಇದನ್ನು ಕೇಳಿ ತೋಳದ ಹತ್ತಿರ ಬಂದು 'ನಾನು ತೆಗೆದರೆ ಯಾವ ಬಹುಮಾನ ಕೊಡುವೆ'ಎಂದು ಕೇಳಿತು.

ತೋಳವು ನಿನಗೆ ದೊಡ್ಡ ಬಹುಮಾನವನ್ನೇ ಕೊಡುತ್ತೇನೆ ಎಂದು ಹೇಳಿ ತೋಳವು ಅಂಗಾತ ಮಲಗಿ ಬಾಯಿಯನ್ನು ತೆಗೆಯಿತು. ಆಗ ಬಕಪಕ್ಷಿ ತನ್ನ ದೊಡ್ಡ ಕೊಕ್ಕಿನಿಂದ ಅಡ್ಡಲಾಗಿದ್ದ ಮೂಳೆಯನ್ನು ಹಿಡಿದು ಹೊರಕ್ಕೆ ತೆಗೆಯಿತು. ಸ್ವಲ್ಪ ಹೊತ್ತು ಸುಧಾರಿಸಿಕೊಂಡಿತು.

ಬಕ ಪಕ್ಷಿ ಬಹುಮಾನವನ್ನು ಕೊಡು ಎಂದು ತೋಳವನ್ನು ಕೇಳಿದಾಗ ತಗೋ ಇದೇ ನಿನಗೆ ದೊಡ್ಡ ಬಹುಮಾನ ಎಂದು ಹೇಳುತ್ತಾ ಹತ್ತಿರಕ್ಕೆ ಬಂದು ಬಕಪಕ್ಷಿಯ ಕತ್ತನ್ನು ಹಿಚುಕಿ ಅದರ ರಕ್ತವನ್ನು ಕುಡಿದು ಹೊರಟು ಹೋಯಿತು.

ಈ ಕಥೆಯ ನೀತಿ ಎಂದರೆ ಕುಹಕಿಗಳ, ಮೋಸಗಾರರ ಮಾತಿಗೆ ಮರುಳಾಗಿ ಅವರಾಡಿದ ಮಾತು ನಿಜವೆಂದು ತಿಳಿದು ಮೋಸ ಹೋಗಬಾರದು. ಯೋಗ್ಯರಾದವರಿಗೆ ಮಾತ್ರ ಸಹಾಯ ಮಾಡಬೇಕು.

- ಅರತಿ, ಹುಬ್ಬಳ್ಳಿ

## ಫೋಟೋ ನೋಡಿ ಆನಂದಿಸಿ







## ಮಾನಸಿಕ ಒತ್ತಡಕ್ಕೆ ವೈಜ್ಞಾನಿಕ ಪರಿಹಾರ

**ಮಾನಸಿಕ ಒತ್ತಡಗಳು ಎಂದರೇನು ?**

ಕೆಲವು ಘಟನೆಗಳನ್ನು ನಾವು ನಮ್ಮ ಜೀವನದಲ್ಲಿ ನಿರೀಕ್ಷಿಸುತ್ತೇವೆ. ಆದಾಗ್ಯೂ ಅವುಗಳನ್ನು ಜೀವನದಲ್ಲಿ ನಮಗೆ ಬೇಕಾದ ಸಾಮರ್ಥ್ಯಗಳ ಬಗ್ಗೆ ಅನುಮಾನ ಇರುತ್ತದೆ. ಈ ಘಟನೆಗಳು ಸಾಧಾರಣವಾಗಿ, ಹೆಚ್ಚಿನದಾಗಿ ಇಲ್ಲದೆ ವಿರಳವಾಗಿ ಒತ್ತಡಗಳನ್ನು ತರಬಲ್ಲವು. ಜೀವನದ ಘಟನೆಗಳು ಸಂತೋಷಕರವಾಗಿ ಇಲ್ಲವೆ ಸಂತುಷ್ಟಿಯನ್ನು ತರದ ಘಟನೆಗಳು ಆಗಿರಬಹುದು. ಉದಾಹರಣೆಗೆ ವಿವಾಹ ಪೂರ್ವ ಪ್ರಣಯ, ವಿವಾಹ ಬಾಹ್ಯ ಸಂಬಂಧಗಳು, ನಮ್ಮ ನೈತಿಕ ಬಲವನ್ನು ಪ್ರಶ್ನಿಸುತ್ತವೆ. ಗೊಂದಲಕ್ಕೆ ಈಡು ಮಾಡುತ್ತವೆ. ಒಬ್ಬ ವ್ಯಕ್ತಿಯು ತನ್ನ ವರ್ತನೆಯನ್ನು ಸುಪ್ತವಾಗಿ ಇಲ್ಲವೆ ಗೋಚರವಾಗಿ ತುಲನೆ ಮಾಡಿದಾಗ ಸಹ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾನೆ.

ಮೂಡಿದ ತುಲನಾತ್ಮಕ ವಿಚಾರಗಳು ಸಂದಿಗ್ಧತೆಯನ್ನು ತಂದಿತ್ತು ಸಮಸ್ಯೆಯ ಪರಿಹಾರಕ್ಕೆ ಅಡ್ಡಿಯಾಗಬಹುದು. ಒತ್ತಡ ಸ್ವರೂಪವು ವ್ಯಕ್ತಿಯು ತನ್ನ ಸಮಾಜದ ಮೌಲ್ಯಗಳಿಗೆ ಹೇಗೆ ಹೊಂದಿಕೊಂಡಿದ್ದಾನೆ ಅನ್ನುವುದರ ಮೇಲೆ ಅವಲಂಬಿಸಿವೆ. ತನ್ನ ಅಂತರಂಗದ ಅಗತ್ಯಗಳು, ಸಹಜ ಪ್ರವೃತ್ತಿಗಳು ಹಾಗೂ ಮೌಲ್ಯಗಳು ಒಂದಕ್ಕೊಂದು ಘರ್ಷಣೆ ಮಾಡಬಲ್ಲವು.

...... ಮುಂದುವರೆಯುವುದು.

# ನಮ್ಮ ಮಕ್ಕಳು

ಆರ್. ವಿಶಾಲಾಕ್ಷಿ ಗುಂಡೂರಾವ್
ನಿವೃತ್ತ ಶಿಕ್ಷಕಿ, ಮೈಸೂರು

ನಾಗರಿಕ ಕತೆಯು ನಾಗಾಲೋಟದಲ್ಲಿ ಗಂಡು ಹೆಣ್ಣಿನ ಜೀವನ ಒಂದು ಯಾಂತ್ರಿಕ ಜೀವನವಾಗಿದೆ ಎಂದೇ ಹೇಳಬಹುದು. ಹಿಂದೆ ವಿವಾಹ ವಿಧಿ ಪೂರೈಸಿದ ಒಂದು - ಎರಡು ವರ್ಷಗಳಲ್ಲೇ ಮಗುವನ್ನು ಪಡೆಯುವುದು ಸರ್ವೇ ಸಾಮಾನ್ಯವಾದ ವಿಷಯವಾಗಿತ್ತು. ಹಾಗಾಗದಿದ್ದರೆ ಸುತ್ತ ಮುತ್ತಲಿನವರ ಅಚ್ಚರಿಯ ಕಣ್ಣುಗಳು ಅವರನ್ನು ಪ್ರಶ್ನಿಸುತ್ತಿದ್ದವು. ಆದರೆ ಇಂದಿನ ಸಮಾಜ ಹಾಗಲ್ಲ. ಮದುವೆಯಾದ ದಂಪತಿಗಳು ಕಡೇ ಪಕ್ಷ ಮೂರು ವರ್ಷಗಳೂ, ಐದು ವರ್ಷಗಳೂ ಸುಖ ದಾಂಪತ್ಯವನ್ನನುಭವಿಸಿ ನಂತರ ಮಕ್ಕಳ ಬಗ್ಗೆಯೇ ಯೋಚಿಸುವುದು ಸರ್ವೇಸಾಮಾನ್ಯವಾಗಿದೆ. ಹಾಗೆ ಅಷ್ಟು ಕಾಲಾನಂತರ ಮಕ್ಕಳನ್ನು ಪಡೆದರೂ ಆ ಮಗುವನ್ನು ಬೆಳೆಸುವ ನಿಟ್ಟಿನಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಕಾರಣ ಗಂಡ- ಹೆಂಡಿರಿಬ್ಬರಿಬ್ಬರೂ ದುಡಿಮೆ ಮಾಡುವುದು. ಅಲ್ಲದೆ ಅವಿಭಕ್ತ ಕುಟುಂಬದ ಕೊರತೆ, ಹಲವಾರು ಕಾರಣಗಳು ಅರಿವಿಲ್ಲದೆ ಹುಟ್ಟಿಕೊಳ್ಳುತ್ತವೆ. ಆದರೆ ಪರಿಹರಿಲಾರದ ಸಮಸ್ಯೆ ಯಾವುದೂ ಇಲ್ಲ. ನಾವು ಇದರ ಬಗ್ಗೆ ಯೋಚಿಸಿ, ಸಮಸ್ಯೆ ಎದುರಾಗದಂತೆ ತಡೆಯಬಹುದು.

ನಿಮಗೆ ಹುಟ್ಟುವ ಮಗು ದೈಹಿಕವಾಗಿ ಮಾನಸಿಕ ಸದೃಢವಾದಾಗ ಮಾತ್ರ ಸಮಾಜದಲ್ಲಿ ಸಹಜವಾಗಿ ಬದುಕಲು ಸಾಧ್ಯ. ಅದಾಗಿ ಬೇಕಾದರೆ ನಾವು ಅದಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಮೊದಲನೆಯದಾಗಿ ಮಗು ಇರುವ ಹಿರಿಯ ವ್ಯಕ್ತಿಗಳ ಪಾಲನೆಯಲ್ಲಿ ಮಗು ಬೆಳೆದರೆ ಎಲ್ಲಕ್ಕಿಂತ ಉತ್ತಮ, ಏಕೆಂದರೆ ಅವರಿಗೆ ತಮ್ಮ ಮೊಮ್ಮಗುವಿನ ಮೇಲೆ ಅಪಾರವಾದ ಪ್ರೀತಿ - ವಾತ್ಸಲ್ಯ ತುಂಬಿರುತ್ತದೆ. ಹಾಗಾಗಿ ಅವರು ಅ ಮಗುವಿನ ಸರ್ವಾಂಗೀಣ ಅಭಿವೃದ್ಧಿಯತ್ತ ಗಮನ ಹರಿಸುವುದರಿಂದ ಮಗುವು ಸಹಜವಾಗಿ ಯಾವ ಕೊರತೆಯೂ ಇಲ್ಲದೆ ಬೆಳೆಯುತ್ತದೆ.

ಕಾರಣಾಂತರದಿಂದ ಈ ಆಧುನಿಕತೆಯ ಬಿರುಗಾಳಿಯಲ್ಲಿ ಅವಿಭಕ್ತ ಕುಟುಂಬಗಳು ವಿರಳವೆಂದೇ ಹೇಳಬಹುದು. ಹಲವು ಸಂದರ್ಭಗಳಲ್ಲಂತೂ ಅತ್ತ ವೃದ್ಧಾಶ್ರಮದಲ್ಲಿ ಅಜ್ಜಿ-ತಾತಂದಿರು ಮೊಮ್ಮಕ್ಕಳನ್ನು ನೆನೆದು ಕಣ್ಣೀರಿಡುತ್ತಿರುತ್ತಾರೆ. ಇತ್ತ ಮೊಮ್ಮಕ್ಕಳೂ ಅಜ್ಜಿ-ತಾತಂದಿರ ಪ್ರೀತಿಯಿಂದ ವಂಚಿತರಾಗಿ ಅವರನ್ನೇ ನೆನೆಯುತ್ತಾ ಮೂಕವೇದನೆಯಿಂದ ಬಳಲುತ್ತಿರುತ್ತಾರೆ. ಈ ನಿಟ್ಟಿನಲ್ಲಿ ಯೋಚಿಸಿ ಸ್ವಲ್ಪ ವಿಶಾಲ ಹೃದಯಿಗಳಾಗಿ ಹಿರಿಯರನ್ನು ಮಕ್ಕಳೊಡನೆ ಮನೆಯಲ್ಲೇ ಇಟ್ಟುಕೊಂಡರೆ ಅದರಿಂದಾಗುವ ಲಾಭ ಬಹಳ.

...... ಮುಂದುವರೆಯುವುದು.

# ಮಹಿಳಾ ವಿಶೇಷ ಕನ್ನಡ ವಾರಪತ್ರಿಕೆ

**ಮೈಸೂರು ಕಛೇರಿ :** ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

ಮಾನ್ಯರೇ,

ಮಹಿಳಾ ವಿಶೇಷ ಪತ್ರಿಕೆಯ 1ವರ್ಷ/ 2 ವರ್ಷ/ 3 ವರ್ಷಯ / 5 ವರ್ಷ/ ಅಜೀವ / ಪೋಷಕ / ಮಹಾ ಪೋಷಕ ಚಂದಾದಾರರಾಗಲು ರೂ.............................. ಬ್ಯಾಂಕ್ ಡಿಡಿ ಚೆಕ್ / ಎಂ. ಓ. ಕಳುಹಿಸುತ್ತಿದ್ದೇನೆ. ನನಗೆ ಪ್ರತಿವಾರವೂ ಪತ್ರಿಕೆಯನ್ನು ನನ್ನ ವಿಳಾಸಕ್ಕೆ ಕಲುಹಿಸಿಕೊಡಬೇಕಾಗಿ ವಿನಂತಿ.

ದಿನಾಂಕ : ಸಹಿ :

## ಚಂದಾ ವಿವರ

ವಾರ್ಷಿಕ ಪತ್ರಿಕೆಗೆ ಚಂದಾ, ಅಂಚೆ ವೆಚ್ಚಕ್ಕಾಗಿ ಹಾಗೂ ಪತ್ರಿಕೆಯ ಅಭಿವೃದ್ಧಿ ಹಾಗೂ ಏಳಿಗೆಗಾಗಿ ಈ ಕೆಳಕಂಡಂತೆ ಚಂದಾ ಹಣವನ್ನು ನಿಗದಿಪಡಿಸಲಾಗಿದೆ.

| | | | |
|---|---|---|---|
| 1 ವರ್ಷಕ್ಕೆ | ...... | ರೂ. | 501/- |
| 2 ವರ್ಷಕ್ಕೆ | ...... | ರೂ. | 1,001/- |
| 3 ವರ್ಷಕ್ಕೆ | ...... | ರೂ. | 1,501/- |
| 5 ವರ್ಷಕ್ಕೆ | ...... | ರೂ. | 2,501/- |
| ಆ ಜೀವ ಸದಸ್ಯತ್ವಕ್ಕೆ | ...... | ರೂ. | 5,001/- |
| ಪೋಷಕ ಸದಸ್ಯತ್ವಕ್ಕೆ | ...... | ರೂ. | 10,001/- |
| ಮಹಾಪೋಷಕ ಸದಸ್ಯತ್ವಕ್ಕೆ | ..... | ರೂ. | 25,001/- |

ಪ್ರತಿಮನೆಯಲ್ಲಿ ತಾಯಿ, ಹೆಂಡತಿ, ಹೆಣ್ಣು ಮಕ್ಕಳು, ಅಕ್ಕ, ತಂಗಿ, ಅತ್ತಿಗೆ, ಅತ್ತೆ ಎಲ್ಲರೂ ಅಥವಾ ಯಾರಾದರೂ ಇದ್ದೇ ಇರುತ್ತಾರೆ. ನಿಮಗೆ ಇಷ್ಟ ಬಂದವರ ಹೆಸರಲ್ಲಿ ಪತ್ರಿಕೆ ಅಭಿವೃದ್ಧಿಗೆ ಪ್ರೋತ್ಸಾಹವನ್ನು ನೀಡಬೇಕೆಂದು ಕೋರಿದೆ. ಈ ಪತ್ರಿಕೆಯಿಂದ ಒಳ್ಳೆಯ ಮಾಹಿತಿಗಳನ್ನು ಜೀವನದಲ್ಲಿ ಟೆನ್ಷನ್ ಫ್ರೀಯಾಗಿರಲು ವಿಷಯಗಳನ್ನು ನೀಡುವುದೇ ಪತ್ರಿಕೆಯ ಉದ್ದೇಶವಾಗಿದೆ. ಯೋಚಿಸಿ ಒಂದು ಒಳ್ಳೆಯ ನಿರ್ಧಾರಕ್ಕೆ ಬನ್ನಿ. ನಿಮ್ಮ ಬಂಧು, ಬಳಗ, ಸ್ನೇಹಿತರಿಗೆ ತಿಳಿಸಿ. ನೀವು ಹಾಗೂ ಅವರನ್ನು ಚಂದಾದಾರರನ್ನಾಗಿ ಮಾಡಬೇಕೆಂದು ವಿನಂತಿಸಿದೆ.

**"ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ."**

## ಸಾನಿಯಾ - ಹಿಂಗೀಸ್‌ಗೆ ವುಹಾನ್ ಕಿರೀಟ



ವುಹಾನ್ ಓಪನ್ ಟೆನ್ನಿಸ್ ಟೂರ್ನಿಯ ಮಹಿಳಾ ಡಬಲ್ಸ್‌ನಲ್ಲಿ ಸಾನಿಯಾ-ಹಿಂಗೀಸ್ ಜೋಡಿ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದು ಪ್ರಸಕ್ತ ಸಾಲಿನಲ್ಲಿ ಈ ಜೋಡಿಯು 7ನೇ ಪ್ರಶಸ್ತಿಯನ್ನು ಪಡೆದಂತಾಯಿತು. ಈ ಜೋಡಿ ಫೈನಲ್‌ನಲ್ಲಿ 6-2-, 6-3 ನೇರ ಸೆಟ್‌ಗಳಿಂದ ರುಮೇನಿಯಾದ ಜೋಡಿಯನ್ನು ಸೋಲಿಸಿದರು.

## ಹೀನಾ ಸಿಧುಗೆ ಸ್ವರ್ಣಪದಕ

8ನೇ ಏಷ್ಯನ್ ಏರ್‌ಗನ್ ಚಾಂಪಿಯನ್‌ಶಿಪ್ ಪಂದ್ಯದಲ್ಲಿ 10 ನೇ ಏರ್ ಪಿಸ್ತೂಲ್ ಮಹಿಳೆಯು ಫೈನಲ್‌ನಲ್ಲಿ ಭಾರತದ ಹೀನಾ ಸಿಧು, ಮೊದಲನೇ ಸ್ಥಾನ ಪಡೆದು ಚಿನ್ನದ ಪದಕವನ್ನು ಪಡೆಕೊಂಡರು. ದ್ವಿತೀಯ ಸ್ಥಾನವನ್ನು ಭಾರತದವರೇ ಆದ ಶ್ವೇತಾ ಸಿಂಗ್ ಪಡೆದರು. ಮೂರನೇ ಸ್ಥಾನವನ್ನು ದಕ್ಷಿಣ ಕೊರಿಯಾದ ಸಿಯಾನ್ ಎಕಿಮ್ ಪಡೆದು ಕಂಚಿನ ಪದಕವನ್ನು ಪಡೆದರು.

## ಡಬ್ಲ್ಯೂ ಟಿಎಗೆ ಇಲ್ಲ ಸೆರೇನಾ

ಅಮೇರಿಕಾದ ಸರೇನಾ ವಿಲಿಯಮ್ಸ್ ವಿಶ್ವದ ನಂ. 1 ಆಟಗಾರ್ತಿ ಗಾಯದಿಂದ ಚೇತರಿಸಿ ಕೊಳ್ಳುವ ಸಲುವಾಗಿ ಮುಂಬರುವ ಚೀನಾ ಓಪನ್ ಹಾಗೂ ಸಿಂಗಾಪುರದಲ್ಲಿ ನಡೆಯಲಿರುವ ವರ್ಷಾಂತ್ಯದ WTA ಫೈನಲ್ಸ್‌ನಿಂದ ಹಿಂದೆ ಸರಿದಿದ್ದಾರೆ ಎಂಬ ಮಾಹಿತಿ ದೊರೆತಿದೆ. ಇವರ ಆಟ ನೋಡಲು 2016 ಹೊಸ ವರ್ಷಕ್ಕಾಗಿ ಕಾಯಬೇಕು. ಅವರು ಆರೋಗ್ಯ ಕಾಪಾಡಿಕೊಂಡು ಆಗಿರುವ ಕಾಯವನ್ನು ಗುಣಪಡಿಸಿಕೊಂಡು ಎಂದಿನಂತೆ ಆಟಕ್ಕೆ ಮರಳಲಿ ಎಂಬುದೇ ಅಭಿಮಾನಿಗಳ ಆಶಯ.

## ಐಸಿಸಿ ಟೀಮ್ ರ್‍ಯಾಂಕಿಂಗ್



ಮೊದಲ ಬಾರಿಗೆ ಮಹಿಳಾ ಕ್ರಿಕೆಟ್ ತಂಡಗಳಿಗೂ ಅಂತರಾಷ್ಟ್ರೀಯ ಕ್ರಿಕೆಟ್‌ನ ಸಮಿತಿ ರ್‍ಯಾಂಕಿಂಗ್ ವ್ಯವಸ್ಥೆಯನ್ನು ಜಾರಿ ಮಾಡಿದೆ. ಆಸ್ಟ್ರೇಲಿಯಾ ತಂಡ 134 ಅಂಕಗಳೊಂದಿಗೆ ಮೋದಲನೇ ಸ್ಥಾನದಲ್ಲಿದ್ದು ಇಂಗ್ಲೆಂಡ್ ತಂಡ 124 ಅಂಕ, ನ್ಯೂಜಿಲೆಂಡ್ 109 ಅಂಕ, ಭಾರತ 105 ಅಂಕ, ವೆಸ್ಟ್‌ಇಂಡೀಸ್ 99 ಅಂಕ, ದಕ್ಷಿಣ ಆಫ್ರಿಕಾ 92 ಅಂಕ. ಪಾಕಿಸ್ತಾನ 81 ಅಂಕ, ಶ್ರೀಲಂಕಾ 74 ಅಂಕ, ಬಾಂಗ್ಲಾ ದೇಶ 57 ಅಂಕ ಹಾಗೂ ಐರ್ಲೆಂಡ್ 26 ಅಂಕಗಳನ್ನು ಪಡೆದಿದೆ. ಮಿಥಿಲ್‌ರಾಜ್ ನೇತೃತ್ವದ ಭಾರತ ತಂಡ ನಾಲ್ಕನೇ ಸ್ಥಾನದಲ್ಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಐಎಸ್‌ಎಲ್ ಉದ್ಘಾಟನಾ ಸಮಾರಂಭ




ಗಣ್ಯಾತಿಗಣ್ಯರ ಸಮ್ಮುಖದಲ್ಲಿ ಐಎಸ್‌ಎಲ್ ಉದ್ಘಾಟನಾ ಸಮಾರಂಭವು ಚೆನ್ನೈನ ಜವಾಹರಲಾಲ್ ನೆಹರು ಸ್ಟೇಡಿಯಂನಲ್ಲಿ ಅದ್ದೂರಿಯಾಗಿ ಆರಂಭಗೊಂಡಿತು. ಹೆಸರಾಂತ ಚಿತ್ರನಟ ರಜನೀಕಾಂತ್, ಅಮಿತಾಬಚ್ಚನ್, ಸಚ್ಚಿನ್ ಹಾಗೂ ಐಶ್ವರ್ಯ ರೈ ಹಾಗೂ ಇತರರು ಪಾಲ್ಗೊಂಡಿದ್ದರು.

## ಅಭಿನಂದನೆಗಳು

ಈ ಕೆಳಗೆ ತಿಳಿಸಿರುವ ಮಹಿಳಾ ಸಂಘಗಳು ನಮ್ಮ ಪತ್ರಿಕೆಯ ವಾರ್ಷಿಕ ಸದಸ್ಯತ್ವವನ್ನು ಪಡೆದಿರುವುದಕ್ಕೆ ಮಹಿಳಾ ವಿಶೇಷ ಬಳಗವು ಸಂಘದ ಎಲ್ಲಾ ಸದಸ್ಯರುಗಳಿಗೂ ಅಭಿನಂದನೆಯನ್ನು ಸಲ್ಲಿಸುತ್ತದೆ.

ಅಧ್ಯಕ್ಷರು : ಸುಮ ಉಪಾಧ್ಯಕ್ಷರು: ಪವಿತ್ರ

ಕಾರ್ಯದರ್ಶಿ : ಯಶೋಧ

**ಶ್ರಿ ಅಣ್ಣಮ್ಮದೇವಿ ಮಹಿಳಾ ಸಂಘ**

ಸುಗ್ಗನಹಳ್ಳಿ

ಅಧ್ಯಕ್ಷರು : ಸರಸ್ವತಿ ಉಪಾಧ್ಯಕ್ಷರು: ಸುವರ್ಣಮ್ಮ

ಕಾರ್ಯದರ್ಶಿ : ಸುಮಿತ್ರಾಗೌಡ

**ಶ್ರೀ ಮಂಗಳಾದೇವಿ ಮಹಿಳಾ ಸಂಘ**

ಮಂಚನಹಳ್ಳಿ

ಅಧ್ಯಕ್ಷರು : ರಾಜಮ್ಮ ಉಪಾಧ್ಯಕ್ಷರು: ಲಕ್ಷ್ಮಮ್ಮ

ಕಾರ್ಯದರ್ಶಿ : ಸರಸ್ವತಮ್ಮ

**ಶ್ರೀ ಪಾರ್ವತಿ ಮಹಿಳಾ ಸಂಘ**

ಹಿಟ್ಟನಹಳ್ಳಿ

ಅಧ್ಯಕ್ಷರು : ಅಂಬುಜ ಉಪಾಧ್ಯಕ್ಷರು:ಕಾಮಾಕ್ಷಿ

ಕಾರ್ಯದರ್ಶಿ: ಜಯಲಕ್ಷ್ಮಿ

**ಶ್ರೀ ಗೌರಿ ಮಹಿಳಾ ಸಂಘ**

ಸರಗೂರು

## ಕೇರಳ ಮುಖ್ಯಮಂತ್ರಿಯಿಂದ ಅಭಿನಂದನೆ



ಸಾಕ್ಷರತಾ ಆಂದೋಲನದ 4 ನೇ ತರಗತಿಯಲ್ಲಿ ಉತ್ತೀರ್ಣರಾದ 84 ವರ್ಷದ ಕರ್ಮಾಲಿ ಎಂಬ ಮಹಿಳೆಯನ್ನು ಕೇರಳದ ರಾಜ್ಯದ ಮುಖ್ಯಮಂತ್ರಿ ಓಮನ್ ಚಾಂಡಿ ಅಭಿಂದಿಸಿದರು.

## ಪೂವಮ್ಮಗೆ ಅರ್ಜುನ ಪ್ರಶಸ್ತಿ

ಕರ್ನಾಟಕದ ಅಥ್ಲೀಟ್ ಎಂಆರ್ ಪೂವಮ್ಮರಿಗೆ ಕೇಂದ್ರ ಕ್ರೀಡಾ ಸಚಿವ ಸರ್ಬಾನಂದ್ ಸೋನೋವಾಲ್ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದರು. ಪೂವಮ್ಮರವರ ಪ್ರಶಸ್ತಿ ಗಳಿಕೆ ಹೀಗೇ ಮುಂದುವರೆಯಲಿ ಎಂದು ಮವಿ ಬಳಗ ಅಭಿನಂದನೆ ಸಲ್ಲಿಸಿದೆ.

**ಹೊಸದಾಗಿ ಸದಸ್ಯತ್ವ ಬಯಸುವವರು ಸಂಪರ್ಕಿಸಿ 9379777793**

# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ**
**(ಪ್ರತಿ ಮಂಗಳವಾರ)**

**ಮೈಸೂರು ಕಛೇರಿ :**
ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

**ಬೆಂಗಳೂರು ಕಛೇರಿ :**
ಸಂಖ್ಯೆ 734, ನ್ಯೂ ಮಸೀದಿ ರಸ್ತೆ,
ಟಿ. ದಾಸರಹಳ್ಳಿ, ಬೆಂಗಳೂರು - 560 057

**ಹೆಚ್.ವಿ. ವೆಂಕಟಸುಬ್ಬರಾವ್,** ಸಂಪಾದಕರು **8880334444**
**(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)**

Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16